**CC 153/2017**

ಪ್ರಧಾನ ಸಿವಿಲ್ ನ್ಯಾಯಧೀಶರು ಮತ್ತು ಪ್ರ .ದ ನ್ಯಾ ದಂ ಗಳ ನ್ಯಾಯಾಲಯ ಹೊಸಪೇಟೆ

**ಸಿಸಿ ನಂಬರ್ 153/2017**

ಸಿ ಡಬ್ಲೂ -1

ಪಿ ಡಬ್ಲೂ -1

| | |
|---|---|
| ಸಾಕ್ಷಿ ಹೆಸರು - | ಶ್ರೀ ಕೆ ಸುಧಾಬಾಯಿ |
| ತಂದೆ ಹೆಸರು | ಎಲ್ ವೆಂಕಟೇಶ್ |
| ವಯಸ್ಸು - | 33 ವರ್ಷಗಳು |
| ಉದ್ಯೋಗ - | ಮಹಿಳಾ ಪೋಲಿಸ್ |
| ವಾಸಸ್ಥಳ - | ಹೊಸಪೇಟೆ |

ಸಾಕ್ಷಿಯನ್ನು ದಿನಾಂಕ 17-05-2022 ರಂದು ಪ್ರಾಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆ- ಎ. ಪಿ. ಪಿ. ಅವರಿಂದ

ನನಗೆ ವಿಪರಿತ ಹಲ್ಲು ನೋವು ಇದ್ದ ಕಾರಣ ದಿನಾಂಕ 19-03-2016 ರಿಂದ 06-05-2016 ರವರಗೆ ನಾನು ಡಾಕ್ಟರ್ ಸಿದ್ದಿಕ್ ದಂದ ವೈದ್ಯರು ಸೋನಿ ಆಸ್ಪತ್ರೆ ಯಲ್ಲಿ ತೋರಿಸಿರುತ್ತೇನೆ. ನನ್ನ ಆರೋಪಿ ನನ್ನ ದವಡೆ ಹಲ್ಲು ಗಳಿಗೆ ರೂಟ್ ಅವರ ನಿರ್ಲಕ್ಷತನದಿಂದ ಒಂದು ದವಡೆ ಹಲ್ಲಿನಲ್ಲಿ ರೂಟ್ ಕೆನಲ್ ಮಾಡುವಾಗ ಇನ್ಸಟ್ರಮೆಂಟ್ ನ್ನು ಅಲ್ಲ ಬಿಟ್ಟಿರುತ್ತಾರೆ. ಆ ಇನ್ಸಟ್ರೂಮೆಂಟ್ ನ್ನು ತೆಗೆಯಲು ಹೋಗಿ ಇನ್ನೊಂದು ಇನ್ಸಟ್ರೂಮೆಂಟ್ ಸಹ ಅದೆ ಹಲ್ಲಿನಲ್ಲಿ ಬಿಟ್ಟಿರುತ್ತಾರೆ. ಹಾಗೂ ಇನ್ನೊಂದು ದವಡೆ ಹಲ್ಲಿಗೆ ರೂಟ್ ಕೆನಲ್ ಮಾಡುವಾಗ ಮಾಮೂಲಿ ಕೋರೆತಕ್ಕಿಂತ ಹೆಚ್ಚಾಗಿ ರೂಟ್ ಕೆನಲ್ ಮಾಡಿರುತ್ತಾರೆ. ಸುಮಾರು 10 ಸಾರಿ ಹೋದರು ಸರಿಯಾಗಿ ಚಿಕಿತ್ಸೆ ನೀಡದ ಕಾರಣ ನಾನು ಬೇರೆ ವೈದ್ಯರಲ್ಲಿ ಹೋಗಿ ತೋರಿಸಿದ್ದಾಗ ಅವರು ಈ ರೀತಿ ನನ್ನ ಹಲ್ಲಿ ದವಡೆ ಯಲ್ಲಿ ಇನ್ಸಟ್ರೂಮೆಂಟ್ ಮುರಿದಿದೆ ಮತ್ತು ಆಳವಾಗಿ ರಂಧ್ರ ಮಾಡಿದಾರೆ ಅಂತಾ ತಿಳಿಸಿರುತ್ತಾರೆ. ಈ ರೀತಿ ನಾನು ಆರೋಪಿಗೆ ಬಂದು ಹೇಳಿದಾಗ ನನಗೆ ಸರಿಯಾಗಿ ಚಿಕಿತ್ಸೆ ನೀಡಿದೆ ನೂನಿಚಿಕೊಂಡಿರುತ್ತಾರೆ. ಆದರೆ ದಿನಾಂಕ 10-05-2016 ರಂದು ದಾರವಾಡಿನ ಎಸ ಡಿ ಎಂ ಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಅಲ್ಲಿನ ವೈದ್ಯರು ಸಹ ನನ್ನ ದವಡೆ ಹಲ್ಲಿನ ಇನ್ಸಟ್ರೂಮೆಂಟ್ ಮುರಿದಿದೆ ಮತ್ತು ದವಡೆ ಹಲ್ಲನ್ನು ಆಳವಾಗಿ ಕೋರಿದಿದೆ ಅಂತಾ ತಿಳಿಸಿರುತ್ತಾರೆ. ಅಲ್ಲಿನ ವೈದ್ಯರು ಎಂಡೋಡೆಂಟಿಸ್ಟ್ ಚಿಕಿತ್ಸೆ ಮಾಡಬೇಕೆಂದು ತಿಳಿಸಿರುತ್ತಾರೆ. ಅಲ್ಲಿಂದ ಪಡೆದ ನಂತರ ನಾನು

**CC 153/2017**

ಪಟ್ಟಣ ಠಾಣಾಯಲ್ಲಿ ದಿನಾಂಕ 23-05-2016 ರಂದು ನಾನು ದೂರು ಸಲ್ಲಿಸಿರುತ್ತೇನೆ ಅದು ಡಿಪಿ ಎಂದು ದಾಖಲಾಗಿರುತ್ತೆ. ಯಾವಾಗ ಆರೋಪಿ ದಿನಾಂಕ 18-06-2016 ರಂದು ಈಗಲು ಸಹ ಚಿಕಿತ್ಸೆ ನೀಡುತ್ತೇನೆ ಎಂದು ಹಿಂಬರ ಬರೆದುಕೊಟ್ಟ ಕಾರಣ ಮುಕ್ತಾಯ ಗೊಳಿಸಿರುತ್ತಾರೆ. ಆದರೆ ಆರೋಪಿ ಯಾವುದೆ ಚಿಕಿತ್ಸೆ ಮತ್ತು ವೆಚ್ಚ ಭರಸಿರುವುದಿಲ್ಲ . ನಾನು ಮಹಿಳಾ ಪೇದಿ ಆದ ಕಾರಣ ಆರೋಪಿಯ ನಿರ್ಲಕ್ಷತನದಿಂದ ಚಿಕಿತ್ಸೆಯಿಂದ ಮಾನಸಿಕ ಮತ್ತು ದಹಿಕ ನೋವುವಾದ ನಾನು ನನ್ನ ಸ್ವಂತ ಖರ್ಚಿನಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ದಿನಾಂಕ 24-09-2016 ರಂದು ದೂರು ದಾಖಲಿಸಿರುತ್ತೇನೆ. ದೂರಿನ ಜೊತೆಗೆ ಆರೋಪಿಯ ವೆಚ್ಚದ ಬಿಲ್ಲುಗಳು ಮತ್ತು ದೂರಿನ ಪ್ರತಿ ಮತ್ತು ಎಸ್ ಡಿ ಎಂ ಸಿ ರಸೀದಿಗಳು ಹಾಜರುಪಡಿಸಿರುತ್ತೇನೆ. ನಾನು ನೀಡಿದ ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1-ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮೂಲ ದಾಖಲಾತಿಗಳು ಲಭ್ಯ ಇಲ್ಲದ ಕಾರಣ ಮುಖ್ಯ ವಿಚಾರಣೆ ಮುಂದುಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಸಿ ಜೆ ಹೊಸಪೇಟೆ

**CC 153/2017**